# ಕಡಲ ಊರಿನಲ್ಲಿ ಕಂಡ ಚಿತ್ರಗಳು



ಗಾಲೆಯ ಕಡಲ ತಟದಲ್ಲಿನ ಡಚ್ ಕೋಟೆ

**ಸುಂದರ ಕಡಲುಗಳಿಂದ ಸುತ್ತುವರೆದಿರುವ 'ಶ್ರೀಲಂಕಾ', ಪ್ರಾಕೃತಿಕ ಭೂದೃಶ್ಯಗಳ ಜೊತೆಗೆ ಬುದ್ಧನ ಬಿಂಬಗಳ ಕಾರಣದಿಂದಲೂ ಗಮನ ಸೆಳೆಯುತ್ತದೆ. ಸಮುದ್ರದ ಸಾಂಗತ್ಯದಲ್ಲಿ ಬದುಕು ಬೆಸೆದುಕೊಂಡಿರುವ ಲಂಕನ್ನರ ಜೀವನ ಆಸಕ್ತಿದಾಯಕ.**

■ ವಾ. ಮುರಳೀಧರ ತೀರ್ಥಹಳ್ಳಿ

ರಾಮಾಯಣ ಕಾಲದಲ್ಲಿ ರಾವಣನು ಸೀತಾಮಾತೆಯನ್ನು ಅಪಹರಿಸಿ ಲಂಕಾ ದ್ವೀಪದ ವನವೊಂದರಲ್ಲಿ ಅಡಗಿಸಿಟ್ಟಿದ್ದನಂತೆ. ಸೂರ್ಯನ ಬೆಳಕು ಅಡಿಯಿಡಲು ಅಂಜುವ ದಟ್ಟ ಅರಣ್ಯದಲ್ಲಿರುವ ಆ ವನ 'ಅಶೋಕ ವನ'ವಂತೆ. ಆಂಜನೇಯನು ಸಮುದ್ರಲಂಘನ ಮಾಡಿ ಅಲ್ಲಿಗೆ ಹೋಗಿ ಸೀತಾಮಾತೆಯನ್ನು ಪತ್ತೆಹಚ್ಚಿದನಂತೆ. ನಂತರ ಕಪಿಗಳು ಕಡಲಿಗೆ ಸೇತುವೆ ಕಟ್ಟಿ ಶ್ರೀರಾಮನು ರಾವಣನನ್ನು ಸಂಹರಿಸಿದನಂತೆ... ಇಂಥ ರೋಚಕ ಕಥನಗಳನ್ನು ಕೇಳಿ ಬೆಳೆದಿದ್ದ ನಮಗೆ ಅದೇ ಸ್ಥಳ ನೋಡುವ ಭಾಗ್ಯ ಇದ್ದಕ್ಕಿದ್ದಂತೆ ಒಲಿದುಬಂದಿತ್ತು. ಕ್ಷಣಮಾತ್ರದಲ್ಲಿ ವೀಸಾ ಕೂಡ ಸಿಕ್ಕಿತ್ತು.

ಕಡಲುಗಳಿಂದ ಸುತ್ತುವರೆದಿರುವ ದ್ವೀಪ ರಾಷ್ಟ್ರವನ್ನು ನೋಡಲು ತವಕದಿಂದ ಹೊರಟೆವು. ಬೆಂಗಳೂರಿನಿಂದ ಕೇವಲ ತಾಸೊಂದರ ಅವಧಿಯಲ್ಲಿ ವಾಯುಮಾರ್ಗದಲ್ಲಿ ರಾವಣನ ನೆಲದಲ್ಲಿ ಅಡಿಯೂರಿದ್ದೆವು.

ಆರ್ಥಿಕ ಸಂಕಷ್ಟದಿಂದ ನರಳಿದ್ದ ಶ್ರೀಲಂಕಾ ಈಗಷ್ಟೇ ಚೇತರಿಸಿಕೊಳ್ಳುತ್ತಿದೆ. ಸಾಮಾನ್ಯವಾಗಿ ಬೇರೆ ದೇಶದ ಪ್ರವಾಸ ದುಬಾರಿ ಎನ್ನುವ ಮಾತಿಗೆ ಅಪವಾದವಾಗಿ ಇದು ಸಾಮಾನ್ಯರಿಗೂ ಎಟುಕುವಂತಿದ್ದುದು ವಿಶೇಷ. ನಮ್ಮ ಭಾರತದ ಒಂದು ರೂಪಾಯಿ, ಲಂಕಾದ ನಾಲ್ಕು ರೂಪಾಯಿಗಳಿಗೆ ಸಮನಾಗಿರುವುದರಿಂದ ಪ್ರವಾಸ ಜೇಬಿಗೆ ಹಿತಕರವೆನಿಸುತ್ತದೆ.

ಶ್ರೀಲಂಕಾ ತಲುಪಿದ ಕೂಡಲೇ ನಮ್ಮನ್ನು ಅಲ್ಲಿನ ಕೆಂದಾಳು ಎಳನೀರು, ಅರ್ಥಾತ್ 'ಕಿಂಗ್ ಕೋಕೊನಟ್' ಸ್ವಾಗತಿಸಿತ್ತು. ಗಾತ್ರದಲ್ಲಿ ಚಿಕ್ಕದಾದರೂ ಒಡಲ ತುಂಬಾ ಸಿಹಿ ನೀರು ಹೊಂದಿರುವ ಈ ಎಳನೀರನ್ನು ಕೆತ್ತಿ ಕೊಡುವ ಬೀದಿ ಬದಿಯ ರೈತನ ಕೈಚಳಕ ಬೆರಗು ಮೂಡಿಸಿತ್ತು. ಹೇಳಿ ಕೇಳಿ ಮೀನು, ಏಡಿ, ಆಮೆ, ಉಡ, ಮೊದಲಾದ ಅಪೂರ್ವ ಜೀವಸಂಕುಲದ ನೆಲವಾದ ಶ್ರೀಲಂಕಾದ ಮತ್ಸ್ಯಸಂಪತ್ತನ್ನು ನೆನಪಿಸುವಂತೆ ಎಳನೀರನ್ನು ಮೀನಿನಾಕಾರದಲ್ಲಿ ಕೆತ್ತಿಕೊಡುವ ರೀತಿ ಹುಬ್ಬೇರಿಸುವಂತೆ ಮಾಡಿತ್ತು.

ಮಾರನೇ ದಿನ ಸುಂದರ ಮುಂಜಾನೆಯಲ್ಲಿ ತಿಮಿಂಗಲ ದರ್ಶನಕ್ಕೆ ಮಿರಿಸ್ಸಾಗೆ ಹೊರಟುನಿಂತೆವು. ಬೋಟಿನಲ್ಲಿ ಹೊರಟ ನಮಗೆ, ಇಂಡಿಯನ್ ಓಷನ್‌ನ ಆಳ ಸಮುದ್ರದಲ್ಲಿ ನೆಲೆಸಿರುವ ತಿಮಿಂಗಲಗಳು ಮುಖ ತೋರಿಸಲು ಚೌಕಾಶಿ ಮಾಡಿ ಬೆನ್ನು ತೋರಿದವು. ಹಾಗೆ ನಿರಾಶರಾದ ಮರುಕ್ಷಣವೇ, ನೂರಾರು ಡಾಲ್ಫಿನ್ನುಗಳು ಕಾಮನಬಿಲ್ಲಿನಾಕಾರದಲ್ಲಿ ನೆಗೆನೆಗೆದು ಸ್ವಾಗತ ಕೋರಿದವು. ಹಾಗೇ ಬಿಟ್ಟ ಕಣ್ಣು ಬಿಟ್ಟಂತೆ, ಡಾಲ್ಫಿನ್ನುಗಳನ್ನು ಹಿಂಬಾಲಿಸಿ, ಆಳ ಸಮುದ್ರದಲ್ಲಿ

